# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಪ್ರವೇಶ ಪರೀಕ್ಷೆ – ೨೦೨೨

ಪ್ರಶ್ನೆಪತ್ರಿಕೆ – ೧

## ಅಕ್ಷರ, ಪದ, ವಾಕ್ಯರಚನೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ**

ಅ. ಕನ್ನಡದ ಅಕ್ಷರ ಮಾಲೆಯನ್ನು ಬರೆದು ವಿವರಿಸಿ. ೧೦

ಆ. ಖ, ಫ, ಭ, ಮ, ರ – ಈ ಅಕ್ಷರಗಳ ಕಾಗುಣಿತ ಮಾಲೆಯನ್ನು ಬರೆಯಿರಿ. ೧೦

ಇ. ವ್ಯಂಜನಗಳು ಎಂದರೇನು? ವಿವರಿಸಿ. ೧೦

ಈ. ಒತ್ತಕ್ಷರ ಎಂದರೇನು? ಉದಾಹರಣೆ ಸಹಿತ ವಿವರಿಸಿ. ೧೦

ಉ. ವಾಕ್ಯದ ಯಾವುದಾದರೂ ಎರಡು ಬಗೆಗಳನ್ನು ತಿಳಿಸಿ. ಉದಾಹರಣೆಯೊಂದಿಗೆ ವಿವರಿಸಿ.? ೦೫

ಊ. ಸಮಾಸ ಪದ ಮತ್ತು ಪದ ಪುಂಜಗಳು ಎಂದರೇನು? ಉದಾಹರಣೆ ಯೊಂದಿಗೆ ಬರೆಯಿರಿ. ೦೫

**II ೧. ಐದು ಪದಗಳಿಗೆ ಅರ್ಥ ಬರೆಯಿರಿ.** **೧x೫=೫**

ಅ) ಮಡಗು ಆ) ಅಕ್ಷಯ ಇ) ಬಲ್ಲೆ ಈ) ಕಾಡು
ಉ) ಉಪವಾಸ ಊ) ಸರಪಣಿ ಋ) ಆಶೆ ಎ) ದೊರಕು
ಏ) ಕುಲಾವಿ ಐ) ಗಗನ

**೨. ಐದು ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.** **೨x೫=೧೦**

ಅ) ಕಂಡಳು ಆ) ನೋಡಿತು ಇ) ಹಣ್ಣನು ಈ) ಬೆಕ್ಕು
ಉ) ನಾಯಿ ಊ) ಹಕ್ಕಿ ಋ) ಹುಡುಗ ಎ) ಜಗಿದು
ಏ) ಕಾಗದ ಐ) ರಾವಣ

(ಪು.ತಿ.ನೋ.)

ಪ್ರ/೧

**೩. ಯಾವುದಾದರೊಂದು ಪದ್ಯಭಾಗವನ್ನು ಪೂರ್ಣಗೊಳಿಸಿ.** **೧x೫=೫**

ಅ) ದಿನದಿನ.......................................
.........................................................
.........................................................
................................ಬೆಳೆಯುವುದು.

ಆ) ಸಲಾಮು ಮಾಡಿ............................................
.............................................................
.............................................................
....................................ಹೊರಟಿತು ಮುಂದೆ.

**III ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ.** **೫x೪=೨೦**

ಅ) ನಾಯಿಯನ್ನು ಯಾರು ನೋಡಿದರು?

ಆ) ತಾಯಿಯು ಮಗುವನ್ನು ಏನೆಂದು ಕರೆದಿದ್ದಾಳೆ?

ಇ) ಬಾಳೆಯ ಹಣ್ಣನ್ನು ನೋಡಿದ ಕಪಿಗಳಿಗೇನಾಯಿತು?

ಈ) ಅಮ್ಮನ ಮನೆಗೆ ಹೊರಡೆಂದಾಗ ಹನುಮಂತುವಿನ ಉತ್ಸಾಹ ಹೇಗಿತ್ತು?

ಉ) ಲಂಕ ಪಟ್ಟಣ ಸುಟ್ಟದ್ದನ್ನು ಹನುಮಂತು ಹೇಗೆ ಅಭಿನಯಿಸಿದನು?

ಊ) ಕಂದನು ಪೆಪ್ಪರಮೆಂಟನ್ನು ನಿರಾಕರಿಸುವುದು ಏಕೆ?

ಋ) ಹಕ್ಕಿ ಹಾರಿ ಹೋಗಿದ್ದು ಏಕೆ.?

**IV ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨x೫=೧೦**

ಅ) ೨೧–೭೦ ರವರೆಗಿನ ಅಂಕಿಗಳನ್ನು ಅಕ್ಷರಗಳಲ್ಲಿ ಬರೆಯಿರಿ

ಆ) ಲೇಖನ ಚಿಹ್ನೆಗಳನ್ನು ಬರೆಯಿರಿ

ಇ) ಹತ್ತು ಹತ್ತು ಇಪ್ಪತ್ತು ಪದ್ಯದ ಸ್ವಾರಸ್ಯವನ್ನು ಬರೆಯಿರಿ.

* * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಪ್ರವೇಶ ಪರೀಕ್ಷೆ – ೨೦೨೨

ಪ್ರಶ್ನೆಪತ್ರಿಕೆ – ೨

## ಭಾಷೆ ಮತ್ತು ಸಾಹಿತ್ಯ ಪರಿಚಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**ಭಾಗ – ೧**

**ಅ. ಹತ್ತು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೧x೧೦=೧೦**

೧) ನವಿಲು ಕಲ್ಲು ಬೆಟ್ಟ ಹೇಗಿತ್ತು?

೨) ಮನೆಯ ಅಂಗಳದ ಸರೋವರದಲ್ಲಿ ಏನಿತ್ತು?

೩) ತ್ರಿಪದಿಯನ್ನು ಏನೆಂದು ಕರೆಯುತ್ತಾರೆ?

೪) ಶಕುನಿಯ ಸೋದರಳಿಯಂದಿರು ಯಾರು ಯಾರು?

೫) ನೂಲನ್ನ ತೆಗೆಯುವ ಸಾಧನಕ್ಕೆ ಏನೆನ್ನುತ್ತಾರೆ?

೬) 'ಶ್ರೀ ರಾಮಾಯಣ ದರ್ಶನಂ' ಕೃತಿಯನ್ನು ಬರೆದವರು ಯಾರು?

೭) ಕಾವಿಯನ್ನು ಉಟ್ಟು ತಿರುಗುವವರು ಏನನ್ನು ಬಿಡಲಿಲ್ಲ?

೮) ಮರವನ್ನು ಕಂಡವರು ಏನು ಮಾಡುತ್ತಾರೆ?

೯) ಖಾದಿ ಬಟ್ಟೇನೇ ಉಡ್ತೇನಿ ಎಂದವರು ಯಾರು?

೧೦) ಹರಿಶ್ಚಂದ್ರನ ಕತೆಯನ್ನು ಯಾರು ಯಾರಿಗೆ ಹೇಳಿದರು?

೧೧) ಹಳ್ಳಿಗಾಡಿನ ಜನ ಯಾವುದರ ಮಧ್ಯೆ ತಮ್ಮ ಕಾಲವನ್ನು ಕಳೆಯುತ್ತಿದ್ದರು.

೧೨) ಸ್ವಾಮಿಯ ಪೂರ್ಣ ಹೆಸರೇನು?

೧೩) ಕುವೆಂಪು ಯಾವ ವಿಶ್ವವಿದ್ಯಾಲಯದ ಕುಲಪತಿಗಳಾದ್ದರು?

**ಆ. ಬಿಟ್ಟ ಸ್ಥಳದಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. ೧x೫=೫**

೧) ಕ್ಲಾಸಿನಲ್ಲಿ ........................... ಫೋಟೋ ತೂಗು ಹಾಕಿದ್ದಾರೆ.
(ಗಾಂಧಿ, ನೆಹರು)

೨) ಊರೆಲ್ಲಾ ನೆಂಟರು ....................... ಬಳಗ (ಶತ್ರುಗಳೆಲ್ಲಾ, ಕೇರಿಯೆಲ್ಲವೂ)

(ಪು.ತಿ.ನೋ.)



೩) ಭಕ್ತಿ ಭಂಡಾರಿ ಎಂದು ಹೆಸರಾದವರು ............. (ಸರ್ವಜ್ಞ, ಬಸವಣ್ಣ)

೪) ಶೇಕ್ಸ್‌ಪಿಯರ್‌ನ ಟೆಂಪೆಸ್ಟ್ ನಾಟಕವನ್ನು.............. ಎಂದು ಅನುವಾದಿಸಲಾಗಿದೆ.
(ರಕ್ತಾಕ್ಷಿ, ಬಿರುಗಾಳಿ)

೫) ಹುಲಿಯಣ್ಣ ನರಿಯಣ್ಣನಿಗಿದ್ದ.......................... ಕೋಡುಗಳನ್ನು ಮುರಿದನು.
(ಮೂರು, ಎರಡು)

**ಇ ಹೊಂದಿಸಿ ಬರೆಯಿರಿ. ೧x೫=೫**

| | |
|---|---|
| ೧) ದುರ್ಯೋಧನ | ೧) ಕೂಡಲ ಸಂಗಮದೇವ |
| ೨) ಇಂಗ್ಲೀಷ್ ಕಾದಂಬರಿಕಾರ | ೨) ಶಕುನಿ |
| ೩) ಕೋಗಿಲೆ ಮತ್ತು ಸೋವಿಯಟ್ ರಷ್ಯಾ | ೩) ಆರ್.ಕೆ. ನಾರಾಯಣ |
| ೪) ಕಾವ್ಯಾನಂದ | ೪) ಸಿದ್ಧಯ್ಯ ಪುರಾಣಿಕ |
| ೫) ಬಸವಣ್ಣ | ೫) ಕುವೆಂಪು |

**ಈ. ಯಾವುದಾದರೂ ಎರಡು ಪದ್ಯಗಳ ಸಾರಾಂಶವನ್ನು ಬರೆಯಿರಿ. ೨x೫=೧೦**

೧. ನೀರ ಕಂಡಲ್ಲಿ ಮುಳುಗುವರಯ್ಯ
ಮರವಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವನೊಣಗುವ ಮರನ
ಮೆಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮ ದೇವ?

೨. ಬ್ರಹ್ಮಜ್ಞಾನಿಗಳೆನಿಸುವಿರಲ್ಲ ಹಮ್ಮು ಬಿಡಲಿಲ್ಲ
ಸುಮ್ಮನೆ ಯಾಗವ ಮಾಡುವಿರಲ್ಲ ಸುಳ್ಳನು ಬಿಡಲಿಲ್ಲ
ಗಮ್ಮನೆ ಪುರಂದರ ವಿಠಲನ ಪಾದಕೆ
ಹೆಮ್ಮೆ ಬಿಟ್ಟು ನೀವೆರಗಲೆ ಇಲ್ಲ

೩. ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದೊಡೆ
ಕೈಲಾಸ ಬಿನ್ನಾವಣಕ್ಕು – ಸರ್ವಜ್ಞ

**ಉ. ಐದಕ್ಕೆ ಟಿಪ್ಪಣಿ ಬರೆಯಿರಿ. ೫x೨=೧೦**

೧) ಬಸವಣ್ಣ ೨) ಪ್ರಭುಶಂಕರ ೩) ದುರ್ಯೋಧನ

೩) ತ್ರಿಪದಿ ೫) ಎ.ಆರ್. ಕೃಷ್ಣಶಾಸ್ತ್ರಿ ೬) ಪುರಂದರ ದಾಸ

೭) ವಚನ

(ಪು.ತಿ.ನೋ.)

**ಊ. ನಾಲ್ಕು ಪ್ರಶ್ನೆಗಳಿಗೆ ಸಂಕ್ಷಿಪ್ತ ಉತ್ತರ ಬರೆಯಿರಿ.** **೪x೫=೨೦**

೧) ಗುಬ್ಬಕ್ಕನಿಗೂ ನರಿಯಣ್ಣನಿಗೂ ನಡೆದ ಮಾತುಕತೆ ಏನು?

೨) ಬಾಲಕೃಷ್ಣ ಮಾಡಿದ ತಪ್ಪು ಯಾವುದು? ಅವನು ಅದನ್ನು ಹೇಗೆ ತಿದ್ದುಕೊಂಡನು.

೩) ಬಸವಣ್ಣ ಬಹಿರಂಗದ ಆಚರಣೆಯನ್ನು ಹೇಗೆ ವಿಡಂಬಿಸಿದ್ದಾರೆ.

೪) ದ್ರೌಪದಿಗೆ ಆದ ಅವಮಾನ ಯಾವ ಬಗೆಯದು?

೫) ಕುವೆಂಪು ಅವರ ಬಾಲ್ಯ ಹೇಗೆ ರೂಪುಗೊಂಡಿತು?

೬) ಅಪ್ಪನಿಗೆ ಸಿಟ್ಟು ಬರಲು ಕಾರಣವೇನು?

೭) ಹಿಂದಿನ ಮೋಜಿನ ತಾಣಗಳು ಹೇಗಿತ್ತು?

## ಭಾಗ – ೨

**ಅ. ಅರ್ಥ ಬರೆಯಿರಿ.** **೪x೧=೪**

ಹಂಗು ತಾಮಸ ವ್ಯಾದಿ ಗರತಿ

**ಆ. ನಾನಾರ್ಥಗಳನ್ನು ಬರೆಯಿರಿ.** **೪x೧=೪**

ಬೇಡ ನವ ಹಳಿ ತೊರೆ

**ಇ. ಬಿಡಿಸಿ ಬರೆಯಿರಿ.** **೪x೧=೪**

ಮಿಂಚಿನುಂಡೆ ಗಟ್ಟಿಯನ್ನು ಉಪಾಯವನ್ನು ಹಿಂಡನಗಲಿದ

**ಈ. ಸೇರಿಸಿ ಬರೆಯಿರಿ.** **೪x೧=೪**

ಜಾಗ + ಇಲ್ಲ ಮನೆ + ಅಲ್ಲಿ

ಮರ + ಅನ್ನು ದಾರಿ + ಅಲ್ಲಿ

**ಉ. ತದ್ಭವ ರೂಪ ಬರೆಯಿರಿ.** **೪x೧=೪**

ಬ್ರಹ್ಮ ತ್ಯಾಗ ಪುಸ್ತಕ ಹಕ್ಕಿ

**ಊ. ಗ್ರಾಂಥಿಕ ರೂಪ ಬರೆಯಿರಿ.** **೪x೧=೪**

ಕ್ವಾಪ ಕಲೀತಾ ಜೋರಿಂದ ಕೂಗೋದು

(ಪು.ತಿ.ನೋ.)



**ಋ. ಈ ಕ್ರಿಯಾಪದಗಳ ವಚನವನ್ನು ಬದಲಾಯಿಸಿ ಬರೆಯಿರಿ.** **೪x೧=೪**

ಹೇಳಿದನು ನೋಡುತ್ತಾನೆ

ಬಿಟ್ಟರು ಬರುತ್ತಿದ್ದಾರೆ

**ೠ. ಸೂಚನೆಗೆ ಅನುಗುಣವಾಗಿ ವಾಕ್ಯರಚನೆ ಮಾಡಿ.** **೪x೧=೪**

೧) 'ಅಲ್ಲ' ಎಂದು ಉತ್ತರ ಬರುವಂತೆ ಪ್ರಶ್ನೆಯೊಂದನ್ನು ರೂಪಿಸಿ.

೨) 'ನರಿಗೆ ಕರಡಿ ಶಾಪಕೊಟ್ಟಿತು' – ಇದನ್ನು ಪ್ರಶ್ನಾರ್ಥಕ ವಾಕ್ಯವಾಗಿ ಪರಿವರ್ತಿಸಿ.

೩) ನಾನು ಊರಿಗೆ ಹೋಗುತ್ತೇನೆ – ಇದನ್ನು ಪ್ರಥಮ ಪುರುಷದಲ್ಲಿ ಬರೆಯಿರಿ.

೪) ಗೌರವವನ್ನು ಸೂಚಿಸಲು ಬಳಸುವ ಬಹುವಚನಕ್ಕೆ ಒಂದು ಉದಾಹರಣೆ ಕೊಡಿ.

**ಎ. ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨x೪=೮**

೧) ಕರ್ತೃ ಮತ್ತು ಕ್ರಿಯಾ ಪದಗಳಿಗೆ ಇರುವ ಸಂಬಂಧವನ್ನು ಉದಾಹರಣೆಗಳೊಂದಿಗೆ ತಿಳಿಸಿ.

೨) ಲೋಪ ಮತ್ತು ಆಗಮ ಸಂಧಿಗಳನ್ನು ಒಂದೊಂದು ಉದಾಹರಣೆಯೊಂದಿಗೆ ಪರಿಚಯಿಸಿ.

೩) ಜೋಡಿ ಪದಗಳು ಎಂದರೇನು? ಐದು ಜೋಡಿ ಪದಗಳನ್ನು ಒಳಗೊಂಡಂತೆ ವಾಕ್ಯ ರಚಿಸಿ.

* * * *